203

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2014–15ನೇ ಸಾಲಿನ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿಯಲ್ಲಿ ಬಿ.ಬಿ.ಎಂ.ಪಿ.ಗೆ ಒದಗಿಸಿರುವ ಅನುದಾನದಲ್ಲಿ ಯಲಹಂಕ ವಲಯದ ಬ್ಯಾಟರಾಯನಪುರ ವಿಭಾಗದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ "Construction of swimming pool at Amruthnagara Byatarayanapura Ward No.07"ರ ಕಾಮಗಾರಿಗೆ ಆಡಳಿತಾತ್ಮಕ ಹಾಗೂ ಟೆಂಡರ್‌ಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ನಅಇ 187 ಎಸ್‌ಎಫ್‌ಸಿ 2014, ದಿನಾಂಕ: 27–01–2015.
2. ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ–1), ದಿನಾಂಕ: 21–06–2016.
3. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರ ಪತ್ರ ಸಂಖ್ಯೆ: ಆಯುಕ್ತರು/ಪಿಆರ್/G8271/2017–18, ದಿನಾಂಕ: 21–03–2018.
4. ದಿನಾಂಕ: 23–03–2018 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿ.

* * * * *

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 27–01–2015ರ ಆದೇಶದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ನಗರೋತ್ಥಾನ ಯೋಜನೆಯಡಿ 2014–15ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ರೂ. 1000.00 ಕೋಟಿಗಳ ಅನುದಾನದಲ್ಲಿ ಕೈಗೊಳ್ಳುವ 532 ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆಯನ್ನು ನೀಡಿದೆ ಹಾಗೂ ಸದರಿ ಕಾಮಗಾರಿಗಳಿಗೆ ಅಧಿಕಾರಯುಕ್ತ ಸಮಿತಿಯಿಂದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಟೆಂಡರ್ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಸರ್ಕಾರದ ಅನುಮೋದನೆಯನ್ನು ನೀಡಲಾಗಿದ್ದು, ಆದೇಶದ ಕ್ರಮ ಸಂಖ್ಯೆ: 514 ರಲ್ಲಿ "ಬ್ಯಾಟರಾಯನಪುರ ವಾರ್ಡ್ ಸಂಖ್ಯೆ: 07ರ ಅಮೃತನಗರದಲ್ಲಿ ಈಜುಕೊಳ ನಿರ್ಮಾಣ ಕಾಮಗಾರಿಗೆ" ರೂ.7.00 ಕೋಟಿಗಳನ್ನು ನಿಗಧಿಪಡಿಸಲಾಗಿರುತ್ತದೆ.

2. ಮೇಲೆ (2) ರಲ್ಲಿ ಓದಲಾದ ದಿನಾಂಕ: 21–06–2016ರ ಆದೇಶದಲ್ಲಿ ನಗರೋತ್ಥಾನ ಯೋಜನೆ, ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ಧಿ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2016–17 ಮತ್ತು 2017–18ನೇ ಸಾಲಿನಲ್ಲಿ ಒಟ್ಟು ರೂ.7300.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಕೆಲವೊಂದು ಷರತ್ತುಗಳನ್ನು ವಿಧಿಸಿ ಅನುಮೋದನೆಯನ್ನು ನೀಡಲಾಗಿದ್ದು, ಆದೇಶದ ಅನುಬಂಧ–17ರ ಕ್ರಮ ಸಂಖ್ಯೆ: (4) ರಲ್ಲಿ 2014–15ನೇ ಸಾಲಿನ ಮುಂದುವರೆದ ಕಾಮಗಾರಿಗಳಿಗೆ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

... 2 ...

Scanned by TapScanner

3. ಮೇಲೆ (3) ರಲ್ಲಿ ಓದಲಾದ ದಿನಾಂಕ: 21-03-2018ರ ಪ್ರಸ್ತಾವನೆಯಲ್ಲಿ, ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವರು 2014-15ನೇ ಸಾಲಿನ ಆಯವ್ಯಯದಲ್ಲಿ 2014-15ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸರ್ಕಾರದ ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ನಅಇ 187 ಎಸ್ಎಫ್ಸಿ 2014, ದಿನಾಂಕ: 27-01-2015 ರಲ್ಲಿ ಅನುಮೋದನೆ ನೀಡಿದ್ದು ಕ್ರಮ ಸಂಖ್ಯೆ: 514 ರಲ್ಲಿ "ಬ್ಯಾಟರಾಯನಪುರ ವಾರ್ಡ್ ಸಂಖ್ಯೆ: 7ರ ಅಮೃತನಗರದಲ್ಲಿ ಈಜುಕೊಳ ನಿರ್ಮಾಣ ಕಾಮಗಾರಿಗೆ" ರೂ.700.00 ಲಕ್ಷಗಳು ಮಂಜೂರಾಗಿರುತ್ತದೆ. ಅದರಂತೆ ಯಲಹಂಕ ವಲಯದ ಯೋಜನಾ ವಿಭಾಗದ ಕಚೇರಿಯಿಂದ ದಿನಾಂಕ: 18-12-2017 ರಂದು ದ್ವಿಲಕೋಟಿ ಇ-ಪ್ರಕ್ಯೂರ್‌ಮೆಂಟ್ ಪದ್ಧತಿಯಂತೆ ರೂ.687.06 ಲಕ್ಷಗಳಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.

4. ಸದರಿ ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ: 16-01-2018 ರಂದು ತೆರೆಯಲಾಗಿದ್ದು, ಟೆಂಡರ್‌ನಲ್ಲಿ ಐದು ಜನ ಬಿಡ್‌ದಾರರಾದ (1) ಶ್ರೀ ಕೆ. ಸೋಮಪ್ಪ, (2) ಶ್ರೀ ಕೆ.ವಿ. ಕೃಷ್ಣಾ ರೆಡ್ಡಿ, (3) ಶ್ರೀ ಎ.ಜಿ ನಾರಾಯಣಸ್ವಾಮಿ, (4) ಶ್ರೀ ಡಿ.ಕೆ. ನಾಗರಾಜ್ ಮತ್ತು (5) ಶ್ರೀ ಪಿ. ಹೇಮಂತ್ ಇವರುಗಳು ಭಾಗವಹಿಸಿರುತ್ತಾರೆ. ಸದರಿ ಬಿಡ್‌ನಲ್ಲಿ ಮೂರು ಜನ ಗುತ್ತಿಗೆದಾರರು ತಾಂತ್ರಿಕವಾಗಿ ಮೂರು ಜನ ಬಿಡ್‌ದಾರರು ಅರ್ಹತೆ ಹೊಂದಿದ್ದು, ಸದರಿಯವರ ತಾಂತ್ರಿಕ ಬಿಡ್‌ನ್ನು ಅಂಗೀಕರಿಸಿ, ಆರ್ಥಿಕ ಬಿಡ್‌ನ್ನು ತೆರೆಯಲು ತೆರೆಯಲು ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಸದರಿ ಸಭೆಯ ನಿರ್ಣಯದಂತೆ ತಾಂತ್ರಿಕವಾಗಿ ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ದಿನಾಂಕ: 07-03-2018 ರಂದು ತೆರೆಯಲಾಗಿದ್ದು, ವಿವರ ಈ ಕೆಳಕಂಡಂತೆ ಇರುತ್ತದೆ:

| ಕ್ರ ಸಂ. | ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) | ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂ.ಲಕ್ಷಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತ ದರಗಳಿಗೆ ಹೋಲಿಸಿದಾಗ ಶೇ. |
|---|---|---|---|---|---|
| 1 | ಶ್ರೀ ಕೆ. ಸೋಮಪ್ಪ | 700.00 | 6,87,06,949.34 | 7,00,75,262.09 | ಶೇ.1.99% ರಷ್ಟು ಹೆಚ್ಚು (ಎಲ್-1) |
| 2 | ಶ್ರೀ ಕೆ.ವಿ. ಕೃಷ್ಣಾ ರೆಡ್ಡಿ | | | 7,23,05,377.22 | ಶೇ.5.24% ರಷ್ಟು ಹೆಚ್ಚು (ಎಲ್-2) |
| 3 | ಶ್ರೀ ಎ.ಜಿ ನಾರಾಯಣಸ್ವಾಮಿ | | | 7,36,94,095.22 | ಶೇ.7.26% ರಷ್ಟು ಹೆಚ್ಚು (ಎಲ್-3) |

5. ಮೇಲ್ಕಂಡ ಕಾಮಗಾರಿಗೆ ಎಲ್-1 ಗುತ್ತಿಗೆದಾರರಾದ ಶ್ರೀ ಕೆ. ಸೋಮಪ್ಪ ರವರು ರೂ.7,00,75,262.09/- ಗಳನ್ನು ನಮೂದಿಸಿದ್ದು, ಈ ಮೊತ್ತವನ್ನು 2016-17ನೇ ಸಾಲಿನ ಲೋಕೋಪಯೋಗಿ ದರಪಟ್ಟಿಗೆ ಹೋಲಿಸಿದಾಗ ಶೇ.1.99% ರಷ್ಟು ಹೆಚ್ಚು ಇದ್ದು, ಕಾಮಗಾರಿಯ ಅಂದಾಜು ಮೊತ್ತ ಹಾಗೂ ಟೆಂಡರ್‌ಗೆ ಅನುಮೋದನೆಯನ್ನು ನೀಡುವ ಬಗ್ಗೆ ಸರ್ಕಾರದ ಹಂತದಲ್ಲಿನ ಅಧಿಕಾರಯುಕ್ತ ಸಮಿತಿಯ ಮುಂದೆ ಮಂಡಿಸುವಂತೆ ಕೋರಿರುತ್ತಾರೆ.



Scanned by TapScanner

6. ಮೇಲೆ (4) ರಲ್ಲಿ ಓದಲಾದ ದಿನಾಂಕ: 23-03-2018 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ವಿಷಯವನ್ನು ಚರ್ಚಿಸಿ ನಿರ್ಣಯಿಸಿದಂತೆ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ನಅಇ 256 ಎಂಎನ್‌ವೈ 2018,**
**ಬೆಂಗಳೂರು, ದಿನಾಂಕ: 25-08-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, 2014-15ನೇ ಸಾಲಿನ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿಯಲ್ಲಿ ಬಿ.ಬಿ.ಎಂ.ಪಿ.ಗೆ ಒದಗಿಸಿರುವ ಅನುದಾನದಲ್ಲಿ ಯಲಹಂಕ ವಲಯದ ಬ್ಯಾಟರಾಯನಪುರ ವಿಭಾಗದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ "Construction of swimming pool at Amruthnagara Byatarayanapura Ward No.07"ರ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 187 ಎಸ್‌ಎಫ್‌ಸಿ 2014, ದಿನಾಂಕ: 27-01-2015ರ ಕ್ರಮ ಸಂಖ್ಯೆ: 514 ರಲ್ಲಿ ಅನುಮೋದನೆ ನೀಡಿರುವ ಕಾಮಗಾರಿಯ ಅಂದಾಜು ಮೊತ್ತ ರೂ.7.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಅಧಿಕಾರಯುಕ್ತ ಸಮಿತಿಯು ಎಲ್-1 ಗುತ್ತಿಗೆದಾರರಾದ ಶ್ರೀ ಕೆ. ಸೋಮಪ್ಪ ರವರು ನಮೂದಿಸಿರುವ ಅಂತಿಮ ಮೊತ್ತ ರೂ.7.0075/- ಕೋಟಿಗಳು (ಏಳುಕೋಟಿ ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ), ಟೆಂಡರ್‌ಗಿಟ್ಟ ಮೊತ್ತ ಹಾಗೂ 2016-17ನೇ ಸಾಲಿನ ದರಗಳಿಗೆ ಹೋಲಿಸಿದಾಗ ಶೇ.1.99% ರಷ್ಟು ಹೆಚ್ಚಿನ ದರಗಳಿಗೆ ಮಿತಿಗೊಳಿಸಿ, ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಟೆಂಡರ್‌ಗೆ ಸರ್ಕಾರದ ಅನುಮೋದನೆ ನೀಡಿದೆ.

1. ಮೇಲಿನ ಕಾಮಗಾರಿಯನ್ನು ಕೆ.ಟಿ.ಪಿ.ಪಿ. ಕಾಯ್ದೆ/ನಿಯಮಗಳು ಹಾಗೂ ಎಲ್ಲಾ ಚಾಲ್ತಿ ನಿಯಮಗಳನ್ನು ಪಾಲಿಸಿಕೊಂಡು ಅನುಷ್ಠಾನಗೊಳಿಸುವುದು.
2. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ-1), ದಿನಾಂಕ: 21-06-2016 ರಲ್ಲಿ 2016-17ನೇ ಸಾಲಿನಲ್ಲಿ ಮೀಸಲಿಟ್ಟ ನಗರೋತ್ಥಾನ ಯೋಜನೆಯ ಅನುದಾನದಿಂದ ಭರಿಸುವುದು. ಹಾಗೂ ಹೆಚ್ಚುವರಿ ಟೆಂಡರ್ ಪ್ರೀಮಿಯಂ ಮೊತ್ತವನ್ನು ಪಾಲಿಕೆಯು ತನ್ನ ಸ್ವಂತ ನಿಧಿಯಿಂದಲೇ ಭರಿಸತಕ್ಕದ್ದು.
3. ಮೇಲಿನ ಕಾಮಗಾರಿಯನ್ನು ಸರ್ಕಾರದಿಂದ ಮಂಜೂರಾದ ಮೊತ್ತದ ಮಿತಿಯಲ್ಲಿಯೇ ಯಾವುದೇ ಹೆಚ್ಚುವರಿಯಾಗದಂತೆ ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.
4. ಸರ್ಕಾರವು ಕಾಮಗಾರಿಗಳಿಗೆ ಆಡಳಿತಾತ್ಮಕ ಮತ್ತು ಟೆಂಡರ್‌ಗಳಿಗೆ ಅನುಮೋದನೆ ನೀಡಿದ್ದಾಗ್ಯೂ ಸಹ ಕಾಮಗಾರಿಯು ಪುನರಾವರ್ತನೆ ಆಗದಂತೆ ನೋಡಿಕೊಳ್ಳತಕ್ಕದ್ದು. ಅನುಮೋದನೆಗೊಂಡಿರುವ ಕಾಮಗಾರಿಯನ್ನಲ್ಲದೆ ಯಾವುದೇ ಕಾರಣಕ್ಕೆ ಬೇರೆ ಕಾಮಗಾರಿಗಳನ್ನು ಕೈಗೊಳ್ಳಬಾರದು.
5. ಮೇಲಿನ ಕಾಮಗಾರಿಗೆ 3rd Party Quality Monitors ಗಳನ್ನು ನೇಮಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.

-4-

Scanned by TapScanner

6. ದಿನಾಂಕ: 23-03-2018ರ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಯಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಹಾಗೂ ನಿಬಂಧನೆಗಳನ್ನು ಷರತ್ತು ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

( ಹೆಚ್.ಎನ್.ಪ್ರಭಾಕರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಮಾನ್ಯ ಉಪ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
9. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ 3 ಮತ್ತು 9) ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
12. ಸರ್ಕಾರದ ಉಪ ಕಾರ್ಯದರ್ಶಿಗಳು-3 ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
13. ಅಧೀಕ್ಷಕ ಅಭಿಯಂತರರು (ತಾಂತ್ರಿಕ ಕೋಶ), ನಗರಾಭಿವೃದ್ಧಿ ಇಲಾಖೆ.
14. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪೂರೈಸಿದೆ
ದಿನಾಂಕ 25/8/2018

Scanned by TapScanner

Annexure to The G.O No. UDD 199 SFC 2016 (P-1), Dated: 21 -06-2016

ಅನುಬಂಧ-17

199

ಸಾಲಿನ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳ ನಗರೋತ್ಥಾನ ಅನುದಾನದಲ್ಲಿ ಪಾಲಿಕೆಯ ಮುಂದುವರೆದ ಕಾಮಗಾರಿಗಳಿಗೆ 2016-17 ಮತ್ತು 2017-18ನೇ ಸಾಲಿನಲ್ಲಿ ಅಗತ್ಯವಾಗಿ ಬೇಕಿರುವ ಅನುದಾನ.

| ಕ್ರಮ | ಯೋಜನೆ/ಕಾಮಗಾರಿಗಳ ವಿವರ | ಯೋಜನಾ ಮೊತ್ತ (ರೂ ಕೋಟಿಗಳಲ್ಲಿ) | 2015-16ನೇ ಸಾಲಿಗೆ ಮುಂದುವ ಮೊತ್ತ (ರೂ ಕೋಟಿಗಳಲ್ಲಿ) | 2016-17ನೇ ಸಾಲಿನಲ್ಲಿ ಬೇಕಾಗುವ ಮೊತ್ತ (ರೂ ಕೋಟಿಗಳಲ್ಲಿ) | 2017-18ನೇ ಸಾಲಿನಲ್ಲಿ ಬೇಕಾಗಿರುವ ಮೊತ್ತ (ರೂ ಕೋಟಿಗಳಲ್ಲಿ) | ಕಾಮಗಾರಿಯ ಪ್ರಗತಿ ಪ್ರಗತಿ |
|---|---|---|---|---|---|---|
| 2014-15ನೇ ಸಾಲಿನ ನಗರೋತ್ಥಾನ ಅನುದಾನದಡಿ ಕೈಗೊಂಡಿರುವ ಕಾಮಗಾರಿಗಳು (ಆದೇಶ ಸಂಖ್ಯೆ: ನಅಇ 187 ಎಸ್.ಎಫ್.ಸಿ 2014 ದಿನಾಂಕ:27.01.2015) | | | | | | |
| 1 | ಈಗಾಗಲೇ ರಸ್ತೆಮೂಲಭೂತ ಸೌಕರ್ಯ ವಿಭಾಗದಿಂದ ಪ್ರಗತಿಯಲ್ಲಿರುವ ಕಾಮಗಾರಿಗಳು 268 ರಸ್ತೆ ಕಾಮಗಾರಿಗಳು | 417.17 | 100.00 | 150.00 | 167.17 | 50% |
| 2 | ವಲಯ ಮಟ್ಟದಲ್ಲಿ ಕೈಗೊಳ್ಳಲು ಹಸ್ತಾಂತರಿಸಿರುವ ಕಾಮಗಾರಿಗಳು - 70 ಕಾಮಗಾರಿಗಳು | 155.86 | 0.00 | 50.00 | 105.86 | ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತವೆ. |
| 3 | ರಸ್ತೆಮೂಲಭೂತ ಸೌಕರ್ಯ ವಿಭಾಗದಿಂದ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುವ ಕಾಮಗಾರಿಗಳು - 47 ಕಾಮಗಾರಿಗಳು | 191.70 | 0.00 | 60.00 | 131.70 | ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿರುತ್ತವೆ |
| 4 | 2014-15ನೇ ಸಾಲಿನ ಮುಂಯವರೆದ ಕಾಮಗಾರಿಗಳು - 152 ಕಾಮಗಾರಿಗಳು | 170.21 | 170.21 | 0.00 | 0.00 | 100% |
| 2015-16ನೇ ಸಾಲಿನ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳ ನಗರೋತ್ಥಾನ ಅನುದಾನದಲ್ಲಿ ಪ್ರಗತಿಯಲ್ಲಿರುವ ಯೋಜನೆಗಳು (ಆದೇಶ ಸಂಖ್ಯೆ ನಅಇ 278 ಎಸ್.ಎಫ್.ಸಿ 2015 ದಿ: 16.07.2015) | | | | | | |
| 5 | ಘನತ್ಯಾಜ್ಯ ವಿಭಾಗದಲ್ಲಿ 6 ಮೊಸ ಯೂನಿಟ್‌ಗಳ ನಿರ್ಮಾಣ ಯೋಜನೆ ಹಾಗೂ 7ನೇ ಯೂನಿಟ್ನ್ನು ಉನ್ನತೀಕರಣಗೊಳಿಸುವುದು. | 110.00 | 110.00 | 0.00 | 0.00 | 100% |
| 6 | ಬೃಹತ್ ನೀರುಗಾಲುವೆ ವಿಭಾಗದಲ್ಲಿ ಮುಂದುವರೆದ ಕಾಮಗಾರಿಗಳು | 90.00 | 75.00 | 3.75 | 11.25 | 75% |

| Zone | No of Works | Estimated amount |
|---|---|---|
| East | 17 | 1460.11 |
| West | 15 | 1288.82 |
| South | 16 | 1690.28 |
| Koramangala Valley | 28 | 2570.44 |
| Yelahanka | 5 | 550.61 |
| Mahadevapura | 16 | 1759.08 |
| Bommanahalli | 33 | 4640.2 |
| Rajarajeshwari Nagar | 8 | 66.1 |
| Dasarahalli | 15 | 430.59 |
| Total | 153 | 15000 |



Scanned by TapScanner

| ಕ್ರ.ಸಂ | ಯೋಜನೆ/ಕಾಮಗಾರಿಗಳ ವಿವರ | ಯೋಜನಾ ವೆಚ್ಚ (ರೂ. ಕೋಟಿಗಳಲ್ಲಿ) | 2015-16ನೇ ಸಾಲಿನ ಬಜೆಟ್ ಘೋಷಣೆ (ರೂ. ಕೋಟಿಗಳಲ್ಲಿ) | 2016-17ನೇ ಸಾಲಿನ ಬಜೆಟ್ ಘೋಷಣೆ (ರೂ. ಕೋಟಿಗಳಲ್ಲಿ) | 2017-18ನೇ ಸಾಲಿನ ಬಜೆಟ್ ಘೋಷಣೆ (ರೂ. ಕೋಟಿಗಳಲ್ಲಿ) | ಕಾಮಗಾರಿಯ ಪ್ರಗತಿ ಶೇಕಡಾವಾರು |
|---|---|---|---|---|---|---|
| 7 | ವಿವಿಧ ವಿಧಾನಸಭೆಗಳಲ್ಲಿ ರೂ.33,000 ಕೋಟಿ ಅಂದಾಜು ವೆಚ್ಚದ ಕೆರೆಗಳ ಮುಂಚೂಣಿಕಿ ಕಾಮಗಾರಿಗಳು | 35.00 | 10.00 | 6.25 | 18.75 | 45% |
| 8 | ಹಾಲಿ ಪ್ರಗತಿಯಲ್ಲಿರುವ ಒಳವರ್ತುಲ ರಸ್ತೆಯಲ್ಲಿ ಕಿತ್ತುರು ರಾಣಿ ಚೆನ್ನಮ್ಮ ವೃತ್ತದಲ್ಲಿ ನಿರ್ಮಾಣಮಾಡುತ್ತಿರುವ ಮೇಲ್ಸೇತುವೆಯ ಮುಂದುವರಿದ ಕಾಮಗಾರಿಗಾಗಿ ಬೇಕಿರುವ ಅನುದಾನ | 35.80 | 23.50 | 12.30 | 0.00 | 70% |
| 9 | ಹಾಲಿ ಪ್ರಗತಿಯಲ್ಲಿರುವ ಬಾಣಾವರ-ತುಮಕೂರು ರಸ್ತೆ ಸಿಗ್ನಲ್‌ಮುಕ್ತ ಕಾರಿಡಾರ್ ಯೋಜನೆಗೆ ಬೇಕಿರುವ ಅನುದಾನ | 24.33 | 8.00 | 16.33 | 0.00 | 60% |
| 10 | ಹಾಲಿ ಪ್ರಗತಿಯಲ್ಲಿರುವ ಹಳೆ ವಿಮಾನ ನಿಲ್ದಾಣ ರಸ್ತೆ ವೆಲ್ಲಾರ ವೃತ್ತದಿಂದ ಕಂಟೋನ್ಮೆಂಟ್ ವರೆಗೆ ಸಿಗ್ನಲ್‌ಮುಕ್ತ ಕಾರಿಡಾರ್ ಯೋಜನೆಗೆ ಬೇಕಿರುವ ಅನುದಾನ. | 109.50 | 44.30 | 40.00 | 25.20 | 55% |
| 11 | ಹಾಲಿ ಪ್ರಗತಿಯಲ್ಲಿರುವ ರಾ.ಹೆ. ವರ್ತುಲ ರಸ್ತೆ (ಮೈಸೂರು ಬ್ಯಾಂಕ್ ಸರ್ಕಲ್ ರಸ್ತೆ) ಹಾಗೂ 10ನೇ ಅಡ್ಡ ರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣ ಯೋಜನೆಗೆ ಬೇಕಾಗಿರುವ ಅನುದಾನ. | 24.99 | 19.51 | 5.50 | 0.00 | 98% |
| 12 | ಹೊರವರ್ತುಲ ರಸ್ತೆ ಮೈಸೂರು ರಸ್ತೆಯಿಂದ — ಸಿಲ್ಕ್‌ಬೋರ್ಡ್‌ವರೆಗೆ ಸಿಗ್ನಲ್‌ಮುಕ್ತ ಕಾರಿಡಾರ್ ಯೋಜನೆ. | 154.44 | 7.67 | 25.00 | 121.77 | 5% |
| 13 | ಮೇಖ್ರಿ ವೃತ್ತದಿಂದ ಹಳೆ ಮದ್ರಾಸ್ ರಸ್ತೆ ಹಾಗೂ ವೈಟ್‌ಫೀಲ್ಡ್ ಮೂಲಕ ಹೋಪ್‌ಫಾರಂವರೆಗೆ ಸಿಗ್ನಲ್‌ಮುಕ್ತ ಕಾರಿಡಾರ್ ಯೋಜನೆ | 144.60 | 7.50 | 25.00 | 112.10 | 5% |
| 14 | ಹಾಲಿ ಪ್ರಗತಿಯಲ್ಲಿರುವ ಮಾಗಡಿ ರಸ್ತೆ ಹಗೂ ಬಸವೇಶ್ವರನಗರ ಮುಖ್ಯರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣ ಯೋಜನೆಗೆ ಬೇಕಿರುವ ಅನುದಾನ. | 24.76 | 3.60 | 20.00 | 1.16 | 30% |
| 15 | ರಾಜಾಜಿನಗರ ಫಾರ್ಮ್ ರಸ್ತೆಯಲ್ಲಿ ಬಸವೇಶ್ವರನಗರ ಮುಖ್ಯರಸ್ತೆ, ಮಂಜುನಾಥನಗರ ಮತ್ತು ಮುಖ್ಯರಸ್ತೆ ಹಾಗೂ ತಿವನಗರ ಮುಖ್ಯರಸ್ತೆಗಳನ್ನೊಳಗೊಂಡಂತೆ ರಸ್ತೆ ವಿಭಜಕ ನಿರ್ಮಾಣ | 89.86 | 0.00 | 20.00 | 69.86 | 0% |
| 16 | ಹಾಲಿ ಪ್ರಗತಿಯಲ್ಲಿರುವ ಫ್ಲೈಓವರ್‌ಗಳು | 71.00 | 71.00 | 50.00 | -50.00 | — |



Scanned by TapScanner

| | ಕಾಮಗಾರಿಗಳ ವಿವರ | ವೆಚ್ಚದ ಮೊತ್ತ (ರೂ. ಕೋಟಿಗಳಲ್ಲಿ) | 2015-16ನೇ ಸಾಲಿನ ಹಣ ಬಿಡುಗಡೆ (ರೂ. ಕೋಟಿಗಳಲ್ಲಿ) | 2016-17ನೇ ಸಾಲಿನ ಹಣ ಬಿಡುಗಡೆ (ರೂ. ಕೋಟಿಗಳಲ್ಲಿ) | 2017-18ನೇ ಸಾಲಿನಲ್ಲಿ ಬೇಡಿಕೆ (ರೂ. ಕೋಟಿಗಳಲ್ಲಿ) | ಕಾಮಗಾರಿಯ ಭೌತಿಕ ಪ್ರಗತಿ |
|---|---|---|---|---|---|---|
| | ಪ್ರಗತಿಯಲ್ಲಿರುವ 2012-13ನೇ ಸಾಲಿನಲ್ಲಿ ಪ್ರಾರಂಭವಾದ ರಸ್ತೆ ಅಗಲೀಕರಣ ಕಾಮಗಾರಿಗಳು (ಮುಂದುವರೆದ ಕಾಮಗಾರಿಗಳು) | 61.00 | 13.50 | 16.00 | 31.50 | 50% |
| | ಪ್ರಗತಿಯಲ್ಲಿರುವ 2012-13ನೇ ಸಾಲಿನಲ್ಲಿ ಪ್ರಾರಂಭವಾದ ರಸ್ತೆ ಕಾಮಗಾರಿಗಳು (ಮುಂದುವರೆದ ಕಾಮಗಾರಿಗಳು) | 45.00 | 45.00 | 0.00 | 0.00 | - |
| | ಪ್ರಗತಿಯಲ್ಲಿರುವ 2013-14ನೇ ಸಾಲಿನಲ್ಲಿ ಪ್ರಾರಂಭವಾದ ಆರ್ಟೀರಿಯಲ್, ಸಬ್-ಆರ್ಟೀರಿಯಲ್ ಮತ್ತು ಇತರೆ ಪ್ರಮುಖ ರಸ್ತೆಗಳ ಅಭಿವೃದ್ಧಿ ಹಾಗೂ ಡಾಂಬರೀಕರಣ ಕಾಮಗಾರಿಗಳಿಗೆ ಪಾವತಿಸಬೇಕಾಗಿರುವ ಮೊತ್ತ | 150.00 | 150.00 | 0.00 | 0.00 | |
| 20 | ಗಾಂಧಿನಗರದ ಸ್ವತಂತ್ರ್ಯ ಉದ್ಯಾನವನದಲ್ಲಿ ತಳಮಹಡಿ ವಾಹನ ನಿಲ್ದಾಣ ನಿರ್ಮಾಣ ಯೋಜನೆ | 79.81 | 3.99 | 20.00 | 55.82 | 15% |
| 21 | ಬಿ.ಟಿ.ಎಂ ಬಡಾವಣೆಯ ಮಡಿವಾಳ ಕೆರೆ ವರೆಯ ಬದಿಯಲ್ಲಿ 20 ಮೀ ಅಗಲದ ರಸ್ತೆ ನಿರ್ಮಾಣ ಯೋಜನೆ | 15.86 | 0.00 | 10.00 | 5.86 | 0% |
| 22 | ಓಕಳೀಪುರಂ ಜಂಕ್ಷನ್‌ನಿಂದ ಪಾಂಟೂನ್ ವೃತ್ತದವರೆಗೆ ಎಂಟು ಪಥದ ಕಾರಿಡಾರ್ ನಿರ್ಮಾಣ ಹಾಗೂ ರೈಲ್ವೆ ಕೆಳಸೇತುವೆಗಳ ನಿರ್ಮಾಣ ಯೋಜನೆ | 102.84 | 14.76 | 50.00 | 38.08 | 25% |
| 23 | ಬೃಹತ್ ನೀರುಗಾಲುವೆ ವಿಭಾಗದಲ್ಲಿ ಮುಂದುವರೆದ ಕಾಮಗಾರಿಗಳು (ಒಟ್ಟು 21 ಕಾಮಗಾರಿಗಳು) | 194.36 | 100.00 | 20.00 | 74.36 | 25% |
| | ಒಟ್ಟು | 2009.00 | 1300.00 | 600.13 | 99.87 | |

S.N. Kalavathi
(S.N Kalavathi)
Under Secretary to Government (Incharge)
Urban Development Department



Scanned by TapScanner

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಯಲಹಂಕ ವಲಯ, ಬೆಂಗಳೂರು-92.

196

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಆಯುಕ್ತರು/ಪಿಆರ್/6817/2017-18

ಆಯುಕ್ತರವರ ಕಛೇರಿ
ಎನ್.ಆರ್.ಚೌಕ, ಬೆಂಗಳೂರು - 02
ದಿನಾಂಕ : 21.03.2018.

ರವರಿಗೆ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ವಿಷಯ : 2014-15ಸಾಲಿನ ನಗರೋತ್ಥಾನ ಅನುದಾನದಡಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿ Construction of swimming pool at Amruthanagara Byatarayanapura ward No.07 ಯೋಜನೆಯ ಟೆಂಡರ್ ಅನುಮೋದನೆ. ನೀಡುವ ಬಗ್ಗೆ (ಅಂದಾಜುಮೊತ್ತ ರೂ.700.00 ಲಕ್ಷ)

ಉಲ್ಲೇಖ:
1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/187/ಎಸ್.ಎಫ್.ಸಿ 214 ಬೆಂಗಳೂರು, ದಿನಾಂಕ: 27-01-2015.
2. ಮಾನ್ಯ ಆಯುಕ್ತರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ:ಮುಆ/ರಮೂಸೌ/ಪಿಆರ್/83/16-17, ದಿನಾಂಕ: 19-07-16
3. Work Indent No: BBMP/2017-18/ OW / WORK _ INDENT28222

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2014-15ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸರ್ಕಾರದ ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ/187/ಎಸ್.ಎಫ್.ಸಿ.2014 ಬೆಂಗಳೂರು ದಿನಾಂಕ: 27-01-2015ರ ಕ್ರಮ ಸಂಖ್ಯೆ : 514 ರಲ್ಲಿ ಲೆಕ್ಕಶೀರ್ಷಿಕೆ. ಪಿ-1732 ಅಡಿಯಲ್ಲಿ ಸದರಿ ಕಾಮಗಾರಿಗೆ ರೂ.700.00 ಲಕ್ಷಗಳು ಮಂಜೂರಾಗಿರುತ್ತದೆ. ಅದರಂತೆ ಯಲಹಂಕ ವಲಯ ಯೋಜನಾ ವಿಭಾಗ ಕಛೇರಿಯಿಂದ ಟೆಂಡರ್ ಸಂಖ್ಯೆ : BBMP /YNK /EE (Project) /TEND/23/2017-18, Date: 18-12-2017 ರಂತೆ ದ್ವಿಲಕೋಟೆ ಇ-ಪ್ರಕ್ಯೂರ್‌ಮೆಂಟ್ ಪದ್ಧತಿಯಂತೆ ರೂ.687.06 ಲಕ್ಷಗಳಿಗೆ (ಟೆಂಡರ್‌ಗಿಟ್ಟ ಮೊತ್ತ) ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಸದರಿ ಟೆಂಡರ್ Construction of swimming pool at Amruthanagara Byatarayanapura ward No.07 ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ: 16-01-2018 ರಂದು ತೆರೆಯಲಾಗಿದ್ದು, ಐದು ಜನ ಬಿಡ್‌ದಾರರು ಭಾಗವಹಿಸಿರುತ್ತಾರೆ. ವಿವರಗಳು ಈ ಕೆಳಕಂಡಂತಿದೆ. ಅದರಲ್ಲಿ ಬಿಡ್‌ದಾರರಾದ ಶ್ರೀ.ಸೋಮಪ್ಪ.ಕೆ, ಶ್ರೀ.ಕೆ.ವಿ.ಕೃಷ್ಣಾರೆಡ್ಡಿ ಹಾಗೂ ಶ್ರೀ.ಎ.ಜಿ.ನಾರಾಯಣಸ್ವಾಮಿ ರವರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದರಿಂದ (ಇದಕ್ಕೆ ಸಂಬಂಧಿಸಿದ ತಾಂತ್ರಿಕ ಮೌಲ್ಯಮಾಪನ ತುಲನಾತ್ಮಕ ಪಟ್ಟಿಯನ್ನು ಕಡತದಲ್ಲಿ ಲಗತ್ತಿಸಿದೆ, ಅನುಬಂಧ-1) ಸದರಿಯವರ ತಾಂತ್ರಿಕ ಬಿಡ್‌ನ್ನು ಅಂಗೀಕರಿಸಿ ಆರ್ಥಿಕ ಬಿಡ್ಡನ್ನು ತೆರೆಯಲು ಮಾನ್ಯ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. (ಸಭೆಯ ನಡವಳಿಯನ್ನು ಕಡತದಲ್ಲಿ ಲಗತ್ತಿಸಿದೆ, ಅನುಬಂಧ-2).

Scanned by TapScanner

| ಕ್ರ.ಸಂ. | ಕಾಮಗಾರಿಯ / ಯೋಜನೆ ಹೆಸರು | ಯೋಜನಾ ಮೊತ್ತ ರೂ.(ಲಕ್ಷಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತ ರೂ. | ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರು | ಷರಾ |
|---|---|---|---|---|---|
| 1 | Construction of Swimming pool at Amruthanagara Byatarayanapura ward No.07 | 700.00 | 68706949.34 | Sri.K.Somappa | ಅರ್ಹರಾಗಿರುತ್ತಾರೆ |
| | | | | Sri.K.V.Krishnareddy | ಅರ್ಹರಾಗಿರುತ್ತಾರೆ |
| | | | | Sri.A.G.Narayanaswamy | ಅರ್ಹರಾಗಿರುತ್ತಾರೆ |
| | | | | Sri.D.K.Nagaraj | ಅರ್ಹರಾಗಿರುತ್ತಾರೆ |
| | | | | Sri.P.Hemanth | ಅರ್ಹರಾಗಿರುತ್ತಾರೆ |

ಸಭೆಯ ನಿರ್ಣಯದಂತೆ ತಾಂತ್ರಿಕವಾಗಿ ಅರ್ಹರಾದ ಶ್ರೀ.ಸೋಮಪ್ಪಕೆ, ಶ್ರೀ.ಕೆ.ವಿ.ಕೃಷ್ಣರೆಡ್ಡಿ ಹಾಗೂ ಶ್ರೀ.ಎ.ಜಿ.ನಾರಾಯಣಸ್ವಾಮಿ ರವರ ಆರ್ಥಿಕ ಬಿಡ್‌ನ್ನು ದಿನಾಂಕ: 07-03-2018 ರಂದು ತೆರೆಯಲಾಯಿತು ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು | ಅಂದಾಜು ಮೊತ್ತ ರೂ.(ಲಕ್ಷಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತ ರೂ. | ಟೆಂಡರ್‌ನಲ್ಲಿ ಸಲ್ಲಿಸಿರುವ ಮೊತ್ತ (ರೂ.ಗಳಲ್ಲಿ) | ಟೆಂಡರ್‌ಗಿಟ್ಟ ಮೊತ್ತ ದರಗಳಿಗೆ ಹೋಲಿಸಿದಾಗ ಶೇ. |
|---|---|---|---|---|---|
| 1 | Sri.K.Somappa | 700.00 | 68706949.34 | 70075262.09 | 1.99% (ಹೆಚ್ಚು) |
| 2 | Sri.K.V.Krishnareddy | 700.00 | 68706949.34 | 72305377.22 | 5.24% (ಹೆಚ್ಚು) |
| 3 | Sri.A.G.Narayanaswamy | 700.00 | 68706949.34 | 73694095.22 | 7.26% (ಹೆಚ್ಚು) |

ಘನ ಸರ್ಕಾರವು ಉಲ್ಲೇಖ (1) ರ ಕ್ರಮ ಸಂಖ್ಯೆ: 514 ರಲ್ಲಿ ಕಾಮಗಾರಿಯ ಪಟ್ಟಿಗೆ ಅನುಮೋದನೆ ನೀಡಿದ್ದು, ತದನಂತರ ಪಾಲಿಕೆಯು ನಿಯಮಗಳಂತೆ ಅಗತ್ಯ ಕ್ರಮಗಳನ್ನು ಕೈಗೆತ್ತಿಕೊಂಡು ಯಲಹಂಕ ವಲಯಕ್ಕೆ ಸೇರಿದ ಯೋಜನಾ ವಿಭಾಗದ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕಾಮಗಾರಿಗಳ ಟೆಂಡರ್ ಗುತ್ತಿಗೆದಾರರಾದ ಶ್ರೀ.ಸೋಮಪ್ಪಕೆ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.7,00,75,262.09 ಗಳು ಅನುಮೋದಿತ ದರಗಳಿಗೆ ಹೋಲಿಸಿದಾಗ ಶೇ.1.99% ಹೆಚ್ಚು ಆಗಿರುತ್ತದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ ಸದರಿ ಯೋಜನಾ ಮೊತ್ತ ರೂ.700.00 (ರೂ.ಏಳುನೂರು ಲಕ್ಷಗಳು) ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಗುತ್ತಿಗೆದಾರರಾದ ಶ್ರೀ.ಸೋಮಪ್ಪಕೆ ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.7,00,75,262.09 (ರೂ.ಏಳು ಕೋಟಿ ಎಪ್ಪತ್ತೈದು ಸಾವಿರದ ಎರಡು ನೂರ ಅರವತ್ತೆರಡು ಮತ್ತು ಒಂಬತ್ತು ಪೈಸೆಗಳು ಮಾತ್ರ) ಅನುಮೋದಿತ ದರಗಳಿಗೆ ಹೋಲಿಸಿದಾಗ ಶೇ 1.02 ಹೆಚ್ಚು ಇದ್ದು, ಸದರಿ ಮೊತ್ತದ ಟೆಂಡರ್‌ಗೆ ಅನುಮೋದನೆ ನೀಡಲು ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಹಾಗೂ
ಪದನ್ಯ ಕಾರ್ಯದರ್ಶಿ ಅಧಿಕಾರಯುಕ್ತ ಸಮಿತಿ

Scanned by TapScanner